**ಓ.ಎಸ್. ನಂಃ 68/2019**

**ಡಿ.ಡಬ್ಲು - 1**

**ಸಾಕ್ಷಿಯನ್ನು ದಿನಾಂಕಃ 29.05.2023 ರಂದು ಪುನಃ ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರು, ಶ್ರೀ. ಎಸ್.ಹೆಚ್.ಜೆ , ರವರಿಂದಃ**

1. ನನ್ನ ಅಜ್ಜ ಮತ್ತು ಅಜ್ಜಿಯ ಹೆಸರು ಯಮನಪ್ಪ ಮತ್ತು ಯಲ್ಲಮ್ಮ ಎಂದರೆ ಸರಿ. ಸದರಿಯವರಿಗೆ 3 ಗಂಡು, 1 ಹೆಣ್ಣುಮಗಳು ಎಂದರೆ ಸರಿ. ನನ್ನ ತಂದೆ ವೀರಭದ್ರಪ್ಪ ಎಂದರೆ ಸರಿ. ನನ್ನ ತಂದೆ ತೀರಿಕೊಂಡಿದ್ದಾರೆಂದರೆ ಸರಿ. ಪ್ರತಿವಾದಿ 1 ರಿಂದ 7 ನಾವುಗಳು ಮಕ್ಕಳು ಎಂದರೆ ಸರಿ. ನನ್ನ ಚಿಕ್ಕಪ್ಪ ನಿಂಗಪ್ಪ ತೀರಿಕೊಂಡಿದ್ದಾರೆಂದರೆ ಸರಿ. ಅವರಿಗೆ ಶಾಂತವ್ವ ಮತ್ತು ಶೋಭಾ ಹೆಂಡತಿ ಮಗಳು ಎಂದರೆ ಸರಿ. ದಾವಾ ಸ್ವತ್ತು ವೀರಭದ್ರಪ್ಪ, ಶಿವಾನಂದಪ್ಪ, ನಿಂಗಪ್ಪರವರ 3 ಜನರ ಹೆಸರಿನಲ್ಲಿ ನಮೂದಾಗಿದೆ ಎಂದರೆ ಸರಿ. ನನ್ನ ತಂದೆಯ ಸಹೋದರಿಯಾದ ಬಾಲಮ್ಮರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ, ಕಾರಣ ಅವರು ಹಕ್ಕು ಬಿಟ್ಟು ಕೊಟ್ಟಿದ್ದಾರೆ. ನನ್ನ ತಂದೆ ಮತ್ತು ಅವರ ಸಹೋದರರು ಒಟ್ಟು ಕುಟುಂಬದಲ್ಲಿ ವ್ಯವಸಾಯ ಮಾಡುತ್ತಾ ಬಂದಿದ್ದರು ಎಂದರೆ ಸರಿ.

2. ವಾದಿ ಕೆ.ಎಸ್.ಆರ್.ಟಿ.ಸಿಯಲ್ಲಿ ನೌಕರಿ ಮಾಡುತ್ತಿದ್ದಾರೆಂದರೆ ಸರಿ. ಸದರಿಯವರು ನೌಕರಿ ಮಾಡುತ್ತಿದ್ದ ಕಾರಣ ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಸದರಿ ವ್ಯವಸಾಯದ ಆದಾಯದಿಂದ ನನ್ನ ತಂದೆ ಎ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿದ್ದಾರೆಂದರೆ ಸರಿ. ಅದೇ ದಿನ ವಾದಿ ಶಿವಾನಂದಪ್ಪ ತನ್ನ ಆದಾಯದಿಂದ ಒಂದು ನಿವೇಶನವನ್ನು ಖರೀದಿ ಹಿಡಿದಿದ್ದಾರೆಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನ್ನ ತಂದೆ ಮತ್ತು ಅವರ ಸಹೋದರರಿಗೆ ಸಮಾನವಾದ ಪಾಲು ಇದೆ ಎಂದರೆ ಸಾಕ್ಷಿಯು ವ್ಯವಸಾಯದ ಜಮೀನಿನಲ್ಲಿ ಮಾತ್ರ ಪಾಲು ಇದೆ ಎಂದು ನುಡಿಯುತ್ತಾರೆ. ಎ ಶೆಡ್ಯೂಲ್ ಸ್ವತ್ತು ಸಹ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಸ್ವತ್ತು ಎಂದರೆ ಸರಿಯಲ್ಲ. ಶಿವಾನಂದಪ್ಪ ಖರೀದಿಸಿರುವ ಸ್ವತ್ತಿನಲ್ಲಿ ನಮಗೆ ಪಾಲು ಇಲ್ಲ ಎಂದರೆ ಸರಿಯಲ್ಲ. ಶಿವಾನಂದಪ್ಪರವರಿಗೆ ತೊಂದರೆ ಕೊಡುವ ಸಲುವಾಗಿ ಅವರ ಸ್ವತ್ತಿನಲ್ಲಿ ಪಾಲು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಹಲವಾರು ಪಾಲು ಕೊಡುವಂತೆ ಕೇಳಿದರೂ ಸಹ ವಿನಾಃಕಾರಣ ತೊಂದರೆ ನೀಡುತ್ತಿದ್ದೇನೆಂದರೆ ಸರಿಯಲ್ಲ.

3. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಾದಿ ಮತ್ತು ನಮ್ಮ ನಡುವೆ ಹಲವು ಗಲಾಟೆಗಳಾಗಿ ಪ್ರಕರಣ ದಾಖಲಾಗಿವೆ ಎಂದರೆ ಸಾಕ್ಷಿಯು ವಯಕ್ತಿಕ ಕಾರಣಕ್ಕಾಗಿ ಆಗಿವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಬೇರೆ ಯಾವುದೇ ನ್ಯಾಯಾಲಯಗಳಲ್ಲಿ ಭಾಗಾಂಶದ ದಾವೆ ಇಲ್ಲ ಎಂದರೆ ಸರಿ.

**ಓ.ಎಸ್. ನಂಃ 68/2019**

**ಡಿ.ಡಬ್ಲು - 1**

**ಪಾಟೀ ಸವಾಲುಃ** ಪ್ರತಿವಾದಿ 8 ಮತ್ತು 9 ರವರ ವಕೀಲರ ಪರ ಶ್ರೀ ಆಯ್.ಎಮ್.ಕೆ ರವರಿಂದ

4. ಬಾಲಮ್ಮ ನನ್ನ ಅತ್ತೆ. ಸದರಿ ಬಾಲಮ್ಮನನ್ನು ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿಲ್ಲ. ನನ್ನ ತಂದೆ ಯಾವುದೇ ನೌಕರಿ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆ ಬಿ ಶೆಡ್ಯೂಲ್ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಂದೆ ಮತ್ತು ಅವರ ಸಹೋದರರು ಕೂಡಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಆದಾಯ ಒಂದೇ ಕೂಡಿ ಕ್ರೂಢೀಕರಣ ಆಗುತ್ತಿತ್ತು ಎಂದರೆ ಸರಿ. ನನ್ನ ತಂದೆ ಹಿರಿತನ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ತಂದೆ ಕುಟುಂಬದ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ನಿಂಗಪ್ಪ ಕೆ.ಎಸ್.ಆರ್.ಟಿ.ಸಿಯಲ್ಲಿ ನೌಕರಿ ಮಾಡುತ್ತಿದ್ದರು ಎಂದರೆ ಸರಿ.

5. ಪ್ಲಾಟ ನಂ.686/1 ಎ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಸ್ವತ್ತು ವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಮೇಲ್ಕಂಡ 3 ಸ್ವತ್ತುಗಳಲ್ಲಿಯೂ ಸಹ 3 ಜನರಿಗೂ ಭಾಗಾಂಶದ ಹಕ್ಕು ಇದೆ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ನಿಂಗಪ್ಪರವರ ಹೆಂಡತಿ ಮಕ್ಕಳಲ್ಲ ಎಂದರೆ ಸಾಕ್ಷಿಯು ನಮಗೆ ಸಂಬಂಧಿಸಿದ್ದಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 8 ಮತ್ತು 9 ಮಾತ್ರ ನಿಂಗಪ್ಪರವರ ಹೆಂಡತಿ ಮಕ್ಕಳು ಎಂದರೆ ಸರಿ. ನಿಂಗಪ್ಪನಿಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದು ಸುಳ್ಳು ಲಿಖಿತ ಹೇಳಿಕೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಂಗಪ್ಪ ತನ್ನ ಆದಾಯವನ್ನು ನನ್ನ ತಂದೆಗೆ ನೀಡುತ್ತಿದ್ದು, ಅದರಿಂದ ನನ್ನ ತಂದೆ ಒಂದು ಪ್ಲಾಟನ್ನು ಖರೀದಿಸಿದ್ದಾರೆಂದರೆ ಸರಿ.

**ಪ್ರತಿವಾದಿ 10 ಮತ್ತು 11 ಮತ್ತು ಅವರ ವಕೀಲರು ಗೈರು ಹಾಜರು ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.